


## ಕನ್ನಡಕದ ಹವ್ಯಾಸ

ವಯಸ್ಸು ಚಾಲೀಸ್ ತುಂಬಿದ ಮೇಲೆ ಚಾಳೀಸು ಬರುವುದು ಸಾಮಾನ್ಯ. ಅಂದ್ರೆ ನಲ್ವತ್ತು ವರ್ಷ ಆಯ್ತೆಂದರೆ ಕಣ್ಣಿಗೆ ಚೆಸ್ಮಾ (ಕನ್ನಡಕ) ಸಾಮಾನ್ಯವಾಗಿ ಬರುತ್ತದೆ ಎನ್ನುವುದು ನಂಬಿಕೆ. ಅಂದಮ್ಯಾಲೆ... ಅದರಲ್ಲಿ ಎಂತಹ ಹವ್ಯಾಸ?

ಇದು ವಯಸ್ಸಾದವರಿಗೆ ಬರೋ ಚಷ್ಮಾ ಅಲ್ಲಾರೀ... ಪುಟ್ಟ ಪುಟ್ಟ ಮಕ್ಕಳು ವಿವಿಧ ಬಗೆಯ ಚಷ್ಮಾ ಹಾಕಿಕೊಂಡಾರಲ್ಲ... ಅದೇ ವಿಶೇಷ.

ಅವರು ಹಾಕಿಕೊಂಡಿರುವ ಚಷ್ಮಾ ಅಂದ್ರೆ ಕನ್ನಡಕಗಳಿಗೆ ಗ್ಲಾಸ್‌ಗಳಿಲ್ಲ. ಅವು ಕಣ್ಣಿನ ದೃಷ್ಟಿ ದೋಷ ನಿವಾರಕ ಕನ್ನಡಕ ಅಲ್ಲವೇ ಅಲ್ಲ. ವೈವಿಧ್ಯಮಯ ಮಾದರಿಯ ಕನ್ನಡಕಗಳನ್ನು ಮನೆಗೆ ಬಂದ ಆಮಂತ್ರಣ ಪತ್ರಿಕೆಗಳಲ್ಲಿ ಮಾಡುವ ಹವ್ಯಾಸವನ್ನು ದಾವಣಗೆರೆಯ ನಿವೃತ್ತ ಬ್ಯಾಂಕ್ ಅಧಿಕಾರಿ ರಘುನಾಥರಾವ್ ರೂಢಿಸಿಕೊಂಡಿದ್ದಾರೆ. ವಿಶೇಷ ಕ್ರೀಡಾಕೂಟಗಳು ಆಯೋಜನೆಗೊಂಡಾಗ ಅವರು ಇಂತಹ ಕಲಾತ್ಮಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಈ ಕನ್ನಡಕಗಳ ವಿಶೇಷತೆ ಬಗ್ಗೆ ಅಕ್ಕಪಕ್ಕದ ಶಾಲಾ ಮಕ್ಕಳಿಗೆ ತಿಳಿಸುತ್ತಾರೆ.

—ಅನುರಾಧ ಟಿ., ದಾವಣಗೆರೆ

## ಯಮರೂಪಿ ಅಣಬೆ

ಇದೊಂದು ಅಪರೂಪದ ಯಮರೂಪಿ ಅಣಬೆ! ಎರಡುವರೆ ಅಡಿ ಉದ್ದದ, ಮುಕ್ಕಾಲು ಅಡಿ ಎತ್ತರದ, ಐದು ಇಂಚು ಅಗಲದ, ಚಲಿಸುವ ರೆಕ್ಕೆ ಹೊಂದಿದ ವಿಚಿತ್ರ ಪ್ರಾಣಿಯಂತೆ ಕಾಣುವ ಈ ಅಣಬೆ ಅಂಕೋಲಾ ತಾಲ್ಲೂಕಿನ ಮೊರಳ್ಳಿಯ ಪ್ರಕಾಶ ರಾಮಾ ನಾಯಕರ ಜಾಗದಲ್ಲಿ ಬಿಡಮೇಲಾಗಿ ಬಿದ್ದು ಒಣಗಿದ ಆಲದ ಮರದ ಬೊಡ್ಡೆಯ ಮೇಲೆ ಅರಳಿ ನಿಂತು ತಾನು ಪ್ರಕೃತಿ ಸೋಜಿಗದಲ್ಲೊಂದು ಎಂದು ಹೇಳುವಂತಿದೆ.

ಥಟ್ಟನೆ ನೋಡಿದರೆ ವಿವಿಧ ಕಲಾಕೃತಿಯಂತೆ ಕಂಡರೂ ಅವರವರ ಭಾವಕ್ಕೆ ಅನುಗುಣವಾಗಿ ನೋಡುಗನಿಗೆ ಹರಿದಾಡುವ ಮೃದ್ವಂಗಿಯಂತೆ, ಕತ್ತರಿಸಿ ಇಟ್ಟ ಬ್ರೆಡ್ಡಿನಂತೆ, ಉದ್ದನೆಯ ಕೇಕಿನಂತೆ, ಮಕ್ಕಳಾಡುವ ವಸ್ತುವಿನಂತೆ, ಬಣ್ಣ ಬಳಿದ ವಾಹನದಂತೆ ಕಂಡರೆ ಆಶ್ಚರ್ಯವಿಲ್ಲ.

—ಬೀರಣ್ಣ ನಾಯಕ ಮೊಗಟಾ





## ಶಿಕ್ರ ಎಂಬ ಶಿಕಾರಿ ಪಕ್ಷಿ

ಈ ಪಕ್ಷಿಯ ಧ್ವನಿಯನ್ನು ಡ್ರ್ಯಾಂಗೋ ಅನುಕರಣೆ ಮಾಡುತ್ತದೆ. ಇದರ ರೆಕ್ಕೆ ಪುಕ್ಕಗಳು ಕೋಗಿಲೆಯನ್ನು ಹೆಚ್ಚು ಹೋಲುತ್ತವೆ. ಎಕ್ಸಿಪಿಟ್ರಿಡೇ ಕುಟುಂಬದಲ್ಲಿರುವ ಈ ಪಕ್ಷಿಗೆ ವೈಜ್ಞಾನಿಕವಾಗಿ ಎಕ್ಸಿಪಿಟರ್ ಬೇಡಿಯಸ್ ಎಂದೂ, ಕನ್ನಡದಲ್ಲಿ ಬಿಜ್ಜು ಎಂತಲೂ ಹೆಸರಿವೆ. ಇಂಗ್ಲಿಷ್‌ನಲ್ಲಿ ಶಿಕ್ರಾ ಹೆಸರು ಹಿಂದಿ ಮತ್ತು ಉರ್ದು ಭಾಷೆಯ ಶಿಕಾರಿ ಪದದಿಂದ ಬಂದಿದೆ.

ಈ ಪಕ್ಷಿಯನ್ನು ಏಶಿಯ ಮತ್ತು ಆಫ್ರಿಕ ಖಂಡದಲ್ಲೆಲ್ಲ ಕಾಣಬಹುದು. ಪ್ರೌಢ ಪಕ್ಷಿಯು ಬೂದು ನೀಲಿ ಬಣ್ಣವಿದ್ದೂ, ಮೇಲ್ಭಾಗ ಕಂದು– ಕಿತ್ತಳೆ ಬಣ್ಣವಿದೆ. ಆಳವಾದ ಕಿತ್ತಳೆ–ಕೆಂಪಾದ ಕಣ್ಣುಗಳಿವೆ. ಹೆಣ್ಣು ಗಂಡಿಗಿಂತ ದೊಡ್ಡದಾಗಿದ್ದೂ, ಹೆಚ್ಚು ಕಂದಾಗಿರುತ್ತದೆ. ಈ ಪಕ್ಷಿಗೆ ಬೇಟೆಯ ಮಾಂಸವನ್ನು ಹರಿದು ತಿನ್ನಲು ಹರಿತವಾದ ಕೊಕ್ಕಿದೆ. ಬಲವಾದ ಕಾಲುಗಳು ಹಾಗೂ ದೂರದಲ್ಲಿರುವ ಬೇಟೆಯನ್ನು ಗುರುತಿಸಬಲ್ಲ ತೀಕ್ಷ್ಣ ಕಣ್ನೋಟವಿದೆ.

ಇದು ದಟ್ಟ ಅರಣ್ಯವನ್ನು ಇಷ್ಟ ಪಡುವುದಿಲ್ಲ. ಸರೀಸೃಪಗಳು, ಕಪ್ಪೆ, ಪಾರಿವಾಳಗಳನ್ನು ಬೇಟೆಯಾಡುತ್ತದೆ. ಎಪ್ರೀಲ್– ಜೂನ್ ಅವಧಿಯಲ್ಲಿ ಗೂಡು ಕಟ್ಟುತ್ತದೆ. ಗಂಡು– ಹೆಣ್ಣುಗಳೆರಡೂ ಮೊಟ್ಟೆಗೆ ಕಾವು ಕೊಡುತ್ತವೆ.

—ಪ್ರಕಾಶ.ಎಸ್.ಮನ್ನಂಗಿ, ಮೋಟೆಬೆನ್ನೂರು.